TRITON
Touching Lives. Moving India.®

August 22, 2024

To
The Secretary
BSE Limited
Corporate Relationship Dept.
14th Floor, P. J. Towers
Dalal Street, Fort
Mumbai - 400 001

**BSE Symbol – 505978**

Dear Sir/Madam,

**Subject: Advertisement in Newspapers – 48th AGM Notice for the year ended March 31, 2024**.

Pursuant to Regulation 30 and 47 of the (Listing Obligations and Disclosure Requirements) Regulations, 2015 ("Listing Regulations"), please find enclosed the copies of the newspaper advertisement, published on August 22, 2024, in Financial Express(English Edition) and Samyukta Karnataka (Kannada edition) , providing the information on 48th Annual General Meeting of the Company that will be held on Friday, September 13, 2024 at 04:00 P.M. through Video Conferencing ('VC') / Other Audio Visual Means ('OAVM').

The above information will also be available on the website of the Company at www.tritonvalves.com.

We request you to kindly take this intimation on record.

Yours truly
For **Triton Valves Limited**

BIBHUTI BHUSAN MISHRA
Digitally signed by BIBHUTI BHUSAN MISHRA
Date: 2024.08.22 05:11:24 -07'00'

**Bibhuti Bhusan Mishra**
**Company Secretary & Compliance Officer**

Encl: a/a

**Triton Valves Limited**
Works : Mercara Road, Belvadi, Mysuru - 570 018, INDIA.
R. O. : Sunrise Chambers, 22, Ulsoor Road, Bangalore - 560 042, INDIA
E : info@tritonvalves.com W : www.tritonvalves.com
CIN. NO: L25119KA1975PLC002867 I GSTIN NO: 29AAACT6671P1ZJ

TUV NORD TUV India Private ISO 14001 / ISO 45001
TUV NORD TUV India Private IATF 16949

# ಚುಟುಕು ಸುದ್ದಿ

## ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬೆಂಬಲ

**ಬೆಂಗಳೂರು:** ಮಂಡ್ಯದಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬೆಂಬಲ ನೀಡುವುದಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ಸರ್ಕಾರದ ಮುಖ್ಯ ಕಾರ್ಯದರ್ಶಿಯನ್ನು ಕಚೇರಿಯಲ್ಲಿ ಭೇಟಿ ನೀಡಿದ ವೇಳೆ ಈ ಮಾತನ್ನು ಹೇಳಿದರು.

ರಾಜ್ಯದಿಂದ ಬಂದಿದ್ದರೂ ಸ್ಪಷ್ಟವಾದ ಕನ್ನಡವನ್ನು ಕಲಿತು ಕನ್ನಡದ ದಿನಪತ್ರಿಕೆಗಳಲ್ಲಿ ಲೇಖನ ಬರೆಯುವ ಮಟ್ಟಿಗೆ ಪರಿಣಿತಿಯನ್ನು ಮುಖ್ಯ ಕಾರ್ಯದರ್ಶಿಯವರು ಪಡೆದಿರುವುದನ್ನು ಜೋಶಿಯವರು ಶ್ಲಾಘಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಶ್ಲಾಘನೆಗೆ ಸ್ಪಂದಿಸಿದ ಮುಖ್ಯ ಕಾರ್ಯದರ್ಶಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲಾ ಚಟುವಟಿಕೆಗಳಿಗೂ ಸರ್ಕಾರ ಸಂಪೂರ್ಣ ಬೆಂಬಲ ನೀಡುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷ ಬಿ.ಎಂ.ಪಟೇಲ್ ಪಾಂಡು ಹಾಜರಿದ್ದರು.

## ಎಚ್‌ಎಸ್‌ಆರ್‌ಪಿ ಪ್ಲೇಟ್ ಅಳವಡಿಕೆಗೆ ಸೆ.15 ಗಡುವು



**ಬೆಂಗಳೂರು:** ರಾಜ್ಯದಲ್ಲಿ ಎಚ್‌ಎಸ್‌ಆರ್‌ಪಿ ನಂಬರ್ ಅಳವಡಿಸಲು ಸೆ. 15ರವರೆಗೆ ಸಾರಿಗೆ ಇಲಾಖೆ ಅವಧಿ ವಿಸ್ತರಿಸಿದೆ.

ಹಿಂದಿನ ಗಡುವು ನವೆಂಬರ್ 17, 2023, ಫೆಬ್ರವರಿ 17, 2024 ಮತ್ತು ಮೇ 17, 2024 ಆಗಿತ್ತು. ಪ್ಲೇಟ್ ಅಳವಡಿಸದೇ ಹೋದಲ್ಲಿ ದಂಡ ಬೀಳಲಿದೆ. 2019ರ ಏಪ್ರಿಲ್ 1 ಕ್ಕೂ ಮುನ್ನ ನೋಂದಣಿಯಾಗಿರುವ ಎಲ್ಲಾ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

## ನಾಳೆ ಸಿಇಸಿ ಸಭೆ ಸಚಿವ ಜಾರ್ಜ್ ಭಾಗಿ

**ಬೆಂಗಳೂರು:** ಜಮ್ಮು-ಕಾಶ್ಮೀರ ಚುನಾವಣಾ ಘೋಷಣೆ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಕಾಂಗ್ರೆಸ್ ಚುನಾವಣಾ ಸಮಿತಿ ಸಭೆ ನಡೆಯಲಿದ್ದು, ಇದರ ಸಿದ್ಧತೆಗಳ ಕುರಿತು ಚರ್ಚಿಸಲು ಶುಕ್ರವಾರ ಇಂಧನ ಸಚಿವ ಕೆ.ಜೆ. ಜಾರ್ಜ್ ಪಾಲ್ಗೊಳ್ಳಲಿದ್ದಾರೆ.



ಚುನಾವಣಾ ಸಮಿತಿಯ ಸದಸ್ಯರಾಗಿರುವ ಸಚಿವ ಜಾರ್ಜ್ ಹೈಕಮಾಂಡ್ ನಾಯಕರ ಸೂಚನೆಯಂತೆ ಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಜಮ್ಮು ಕಾಶ್ಮೀರದ ಚುನಾವಣೆಗೆ ಕಾಂಗ್ರೆಸ್‌ನ ಸಿದ್ಧತೆ ಜತೆಗೆ ಅಭ್ಯರ್ಥಿಗಳ ಆಯ್ಕೆ ಕುರಿತಂತೆಯೂ ಮಹತ್ವದ ಚರ್ಚೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

## ವಿಶೇಷ ಒಡಂಬಡಿಕೆ

**ಬೆಂಗಳೂರು:** ಮೆರಿಟ್‌ಟ್ರ್ಯಾಕ್ ಹಾಗೂ ಆರೋಗ್ಯ ಸೇವಾ ವೃತ್ತಿಪರರಿಗೆ ಶೈಕ್ಷಣಿಕವಾಗಿ ಸಹಕರಿಸುತ್ತಾ ಜಾಗತಿಕವಾಗಿ ಮುಂಚೂಣಿಯಲ್ಲಿರುವ ಸಂಸ್ಥೆ ಆಕ್ಯುಪೇಷನಲ್ ಇಂಗ್ಲಿಷ್ ಟೆಸ್ಟ್ (ಒಇಟಿ) ಜೊತೆ ವಿಶೇಷ ಒಡಂಬಡಿಕೆ ಮಾಡಿಕೊಂಡಿದೆ.

ಜಾಗತಿಕವಾಗಿ 2030ರ ವೇಳೆಗೆ 4.5 ಮಿಲಿಯನ್ ನರ್ಸ್‌ಗಳ ಕೊರತೆ ಉಂಟಾಗಲಿದೆ ಎಂಬ ನಿರೀಕ್ಷೆ ಇದೆ. ಈ ನಿಟ್ಟಿನಲ್ಲಿ ಮೆರಿಟ್‌ಟ್ರ್ಯಾಕ್ ಸಂಸ್ಥೆಯು 12 ಆರೋಗ್ಯ ಸೇವಾ ವೃತ್ತಿಗಳಿಗೆ ಬೇಕಾಗುವ ಇಂಗ್ಲಿಷ್ ಟೆಸ್ಟ್‌ನ ಆವೃತ್ತಿಗಳನ್ನು ಹೊಂದಿರುವ ಒಇಟಿ ಟೆಸ್ಟ್ ಸಂಸ್ಥೆ ಜೊತೆಗೆ ಸಹಭಾಗಿತ್ವ ಮಾಡಿಕೊಂಡಿದೆ.

ಅನುಮತಿಗೆ ಏಕಗವಾಕ್ಷಿ ಪದ್ಧತಿ ಜಾರಿ । ಮೊಬೈಲ್ ಟ್ಯಾಂಕರ್‌ಗಳ ವ್ಯವಸ್ಥೆ । ಕೆರೆ-ಕಲ್ಯಾಣಿಗಳ ಬಳಿ ಭದ್ರತೆ

# ಪಿಒಪಿ ಗಣಪತಿ ಮೂರ್ತಿಗಳ ನಿಷೇಧ

**ಬೆಂಗಳೂರು:** ಪಿಒಪಿ ಗಣೇಶ ಮೂರ್ತಿಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಪುರಭವನದಲ್ಲಿ ಗಣೇಶ ಚತುರ್ಥಿ ಆಚರಣೆ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಬಿಬಿಎಂಪಿ ಮತ್ತು ನಗರ ಪೊಲೀಸ್ ಜಂಟಿ ಸಹಯೋಗದಲ್ಲಿ ನಡೆದ ಶಾಂತಿ ಸೌಹಾರ್ದತೆ ಸಭೆಯಲ್ಲಿ ಮಾತನಾಡಿದ ಅವರು, ಯಾರೂ ಕೂಡಾ ಪಿಒಪಿ ಗಣೇಶ ಮೂರ್ತಿಗಳನ್ನು ಖರೀದಿಸದೆ ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನು ಮಾತ್ರ ಪೂಜಿಸಲು ತಿಳಿಸಿದರು.

ಗಣೇಶ ಹಬ್ಬದ ಪ್ರಯುಕ್ತ ಸಾರ್ವಜನಿಕರಿಗೆ ಅನುವಾಗುವಂತೆ ಪಾಲಿಕೆಯ 63 ಉಪ ವಿಭಾಗ ಕಚೇರಿಗಳಲ್ಲಿ ಬಿಬಿಎಂಪಿ, ಪೊಲೀಸ್, ಬೆಸ್ಕಾಂ ಮತ್ತು ಅಗ್ನಿಶಾಮಕ ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಿ ಏಕಗವಾಕ್ಷಿ ಕೇಂದ್ರಗಳನ್ನು ತೆರೆಯಲಾಗುವುದು ಹಾಗೂ ನೋಡಲ್ ಅಧಿಕಾರಿಗಳ ವಿವರವಾದ ಮಾಹಿತಿಯನ್ನು ಶೀಘ್ರವೇ ಬಿಡುಗಡೆ ಮಾಡಲಾಗುತ್ತದೆ. ಅದರನುಸಾರ ಗಣೇಶ ಮೂರ್ತಿಗಳನ್ನಿಡುವವರು ಏಕಗವಾಕ್ಷಿ ಸ್ಥಳಕ್ಕೆ ಭೇಟಿ ನೀಡಿ ಒಂದೇ ಸ್ಥಳದಲ್ಲಿ ಅನುಮತಿ ಪಡೆಯಬಹುದೆಂದು ಹೇಳಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿವರ್ಷದಂತೆ ಪಾಲಿಕೆ ವತಿಯಿಂದ ಗಣೇಶ ವಿಸರ್ಜನೆಗೆ ಹಲಸೂರು ಕೆರೆ ಸೇರಿದಂತೆ ಇನ್ನಿತರೆ ಪ್ರಮುಖ ಕೆರೆಗಳ ಕಲ್ಯಾಣಿಗಳಲ್ಲಿ ಸೂಕ್ತ ವ್ಯವಸ್ಥೆ ಮಾಡಿಕೊಂಡು ಸರಿಯಾಗಿ ವಿಸರ್ಜನೆ ಮಾಡಲು ಅವಕಾಶ ಮಾಡಿಕೊಡಲಾಗುವುದು. ಪ್ರಮುಖ ಸ್ಥಳ/ಜಂಕ್ಷನ್ ಮತ್ತು ಅವಶ್ಯಕತೆ ಇರುವ ಕಡೆ ವಾರ್ಡ್‌ವಾರು ತಾತ್ಕಾಲಿಕವಾಗಿ ಸಂಚಾರ ವಿಸರ್ಜನಾ ಘಟಕ (ಮೊಬೈಲ್ ಟ್ಯಾಂಕ್)ಗಳನ್ನು ಪ್ರತಿವರ್ಷದಂತೆ ವ್ಯವಸ್ಥೆ ಮಾಡಲಾಗುತ್ತದೆ. ಗಣೇಶ ಮೂರ್ತಿಗಳ ವಿಸರ್ಜನೆಗೆ ಗುರುತಿಸಿರುವ ಕೆರೆಗಳ ಕಲ್ಯಾಣಿಗಳ ಬಳಿ ಭದ್ರತೆಯ ದೃಷ್ಟಿಯಿಂದ ಪೊಲೀಸ್ ವ್ಯವಸ್ಥೆಯ ಜೊತೆಗೆ ಬ್ಯಾರಿಕೇಡಿಂಗ್, ಸಿಸಿಟಿವಿ, ವಿದ್ಯುತ್ ದ್ವೀಪ, ನುರಿತ ಈಜುಗಾರರ ವ್ಯವಸ್ಥೆ, ಕ್ರೇನ್‌ಗಳ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ ಎಂದರು.



ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಮಾತನಾಡಿ, ಪ್ರತಿವರ್ಷದಂತೆ ಶಾಂತಿ ಸೌಹಾರ್ದತೆಯಿಂದ ಗಣೇಶ ಹಬ್ಬವನ್ನು ಆಚರಿಸಬೇಕು. ಈಗಾಗಲೇ ಎಲ್ಲಾ ಕಡೆ ಶಾಂತಿ ಸಭೆಗಳನ್ನು ನಡೆಸಲಾಗಿದೆ. ಈ ಬಾರಿ ಯಾವುದೇ ರೀತಿಯ ಅನಾನುಕೂಲವಾಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಪಾಲಿಕೆ, ಪೊಲೀಸ್ ಇಲಾಖೆಯಿಂದ ಬರುವ ಸಲಹೆ, ಸೂಚನೆಗಳನ್ನು ಎಲ್ಲರೂ ತಪ್ಪದೆ ಪಾಲಿಸಬೇಕು. ಮೆರವಣಿಗೆ, ಮೆರವಣಿಗೆಯ ಮಾರ್ಗಕ್ಕೆ ಎಲ್ಲರೂ ಸಹಕಾರ ನೀಡಬೇಕು. ಹಬ್ಬದ ವೇಳೆ ಅನಾನುಕೂಲ, ಅಚಾತುರ್ಯ ನಡೆಯದಂತೆ ನೋಡಿಕೊಳ್ಳಲಾಗುವುದು. ಎಲ್ಲಿಯೂ ಸಂಚಾರ ದಟ್ಟಣೆಯಾಗದಂತೆ ಪೊಲೀಸ್ ಅಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳಲಿದ್ದಾರೆಂದರು.

### ಆಯೋಜಕರ ಪ್ರಮುಖ ಸಲಹೆ

- ಗಣಪತಿ ವಿಸರ್ಜನೆ ಮಾಡಲು ಸೂಕ್ತವಾದ ಸ್ಥಳ ನಿಗದಿಪಡಿಸಿ, ವಿಸರ್ಜನೆಗೆ ಅವಕಾಶ ಕಲ್ಪಿಸಿಕೊಡಬೇಕು
- ಸೂಕ್ಷ್ಮ ಪ್ರದೇಶಗಳಲ್ಲಿ ಸರಿಯಾದ ಪೊಲೀಸ್ ಭದ್ರತೆಗೆ ಮನವಿ
- ಧಾರ್ಮಿಕ ಆಚರಣೆಗಳು ನಡೆಸುವಾಗ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕ್ರಮವಹಿಸುವುದು
- ಗಣೇಶ ವಿಸರ್ಜನೆಯ ಮೆರವಣಿಗೆಯ ವೇಳೆ ಸಂಚಾರ ದಟ್ಟಣೆಯಾಗದಂತೆ ಕ್ರಮವಹಿಸುವುದು
- ಗಣೇಶ ವಿಸರ್ಜನಾ ಸಮಯದಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸುವುದು
- ಗಣೇಶ ಪ್ರತಿಷ್ಠಾಪನೆಯ ಸ್ಥಳದಲ್ಲಿ ಫ್ಲೆಕ್ಸ್, ಬ್ಯಾನರ್ ಅಳವಡಿಸಲು ಅನುಮತಿಗೆ ಮನವಿ
- ಮೊಬೈಲ್ ಟ್ಯಾಂಕರ್‌ಗಳನ್ನು ಹೆಚ್ಚಾಗಿ ಯೋಜಿಸುವುದು
- ಗಣೇಶ ವಿಸರ್ಜನಾ ಮೆರವಣಿಗೆಯ ವೇಳೆ ಬೆಸ್ಕಾಂ ಇಲಾಖೆಯಿಂದ ಅಗತ್ಯ ಕ್ರಮಕೈಗೊಂಡು ಯಾವುದೇ ವಿದ್ಯುತ್ ಅವಘಡ ನಡೆಯದಂತೆ ನೋಡಿಕೊಳ್ಳಬೇಕು.
- ಹೆಚ್ಚು ಗಣೇಶ ಮೂರ್ತಿಗಳ ಪ್ರತಿಷ್ಠಾಪನೆಗೆ ಅವಕಾಶ ನೀಡಬಾರದು
- ಕೆರೆಗಳ ಬಳಿಯಿರುವ ಕಲ್ಯಾಣಿಗಳಲ್ಲಿ ವಿಸರ್ಜನೆ ಮಾಡುವ ವೇಳೆ ಸಾಕಷ್ಟು ಗಣೇಶ ಮೂರ್ತಿಗಳನ್ನು ರಸ್ತೆಬದಿಯೇ ಇಟ್ಟು ಹೋಗುತ್ತಾರೆ. ಅದನ್ನು ತಪ್ಪಿಸಬೇಕು
- ಮೆರವಣಿಗೆ ಹೋಗುವ ರಸ್ತೆಗಳನ್ನು ಸರಿಯಾಗಿ ದುರಸ್ತಿಪಡಿಸಬೇಕು.

# ಶ್ರೀ ಗುರುರಾಘವೇಂದ್ರ ಅನುಗ್ರಹ ಪ್ರಶಸ್ತಿ ಪ್ರದಾನ




ಬಿಜಿಎಸ್ ಮತ್ತು ಎಸ್.ಜೆ.ಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಕಾಶನಾಥ ಸ್ವಾಮೀಜಿ ಅವರಿಗೆ ಮಂತ್ರಾಲಯದ ಪೀಠಾಧಿಪತಿ ಡಾ.ಸುಬುಧೇಂದ್ರ ತೀರ್ಥರು ಪ್ರಶಸ್ತಿ ಪ್ರದಾನ ಮಾಡಿದರು.

**ಬೆಂಗಳೂರು:** ಶ್ರೀ ರಾಘವೇಂದ್ರ ಸ್ವಾಮಿಗಳ 353ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಶ್ರೀ ಗುರುರಾಘವೇಂದ್ರ ಅನುಗ್ರಹ ಪ್ರತಿಷ್ಠಿತ ಪ್ರಶಸ್ತಿಗೆ ಬಿಜಿಎಸ್ ಮತ್ತು ಎಸ್‌ಜೆಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಕಾಶನಾಥ ಸ್ವಾಮೀಜಿಗೆ ಲಭಿಸಿದೆ.

ಸೋಮವಾರದಿಂದ ಆರಂಭವಾದ ಶ್ರೀ ರಾಘವೇಂದ್ರ ಮಹೋತ್ಸವ ಆ.24ರವರೆಗೆ ನಡೆಯಲಿದ್ದು ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮಂತ್ರಾಲಯದ ಪೀಠಾಧಿಪತಿ ಡಾ.ಸುಬುಧೇಂದ್ರತೀರ್ಥರು, ಡಾ.ಪ್ರಕಾಶನಾಥ ಸ್ವಾಮೀಜಿಗೆ ಪ್ರಶಸ್ತಿ ಪ್ರದಾನ ಮಾಡಿ ನಂತರ ಮಾತನಾಡಿದ ಅವರು, ಗುರುಗಳ ಆಶೀರ್ವಾದ ದೊರೆತರೆ ಯಾವುದೇ ಗುರಿಯೂ ಅಸಾಧ್ಯವಲ್ಲ. ದೃಢ ಸಂಕಲ್ಪದೊಂದಿಗೆ ಗುರುಗಳ ಮಾರ್ಗದರ್ಶನದಲ್ಲಿ ಮುಂದಡಿ ಇಟ್ಟರೆ ಜಯ ಶತಃಸಿದ್ಧ ಎಂಬುದು ಸಾರ್ವತ್ರಿಕ ಹಾಗೂ ಸಾರ್ವಕಾಲಿಕ ಸತ್ಯ. ಇತಿಹಾಸದ ಪುಟಗಳಲ್ಲಿ ಈಗಾಗಲೇ ನಮೂದಾಗಿ ಹೋಗಿದೆ ಎಂದರು.

# ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ



ಜಿಕೆವಿಕೆ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ 'ಅಮ್ಮನಿಗಾಗಿ ಒಂದು ಮರ' ಕಾರ್ಯಕ್ರಮದಲ್ಲಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ಸಸಿ ನೆಟ್ಟು ನೀರೆರೆದರು.

**ಬೆಂಗಳೂರು:** ಪ್ರಧಾನಮಂತ್ರಿಗಳ ಕರೆಯಂತೆ 'ಅಮ್ಮನಿಗಾಗಿ ಒಂದು ಮರವು' ಎಂಬ ಭಾವನಾತ್ಮಕ ಕಾರ್ಯಕ್ರಮವಾಗಿದ್ದು ಪರಿಸರವು ತಾಯಿಗೆ ಸಮಾನವಾಗಿದ್ದು ಅದನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಬೆಂ.ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ.ಸುರೇಶ್ ತಿಳಿಸಿದರು. ಜಿಕೆವಿಕೆ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ 'ಅಮ್ಮನಿಗಾಗಿ ಒಂದು ಮರ' ಕಾರ್ಯಕ್ರಮದಲ್ಲಿ ಸಸಿ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಮನುಷ್ಯನ ದುರಾಸೆಯಿಂದ ಪರಿಸರಕ್ಕೆ ಹಾನಿಯುಂಟಾಗುತ್ತಿದ್ದು ಪ್ರತಿವರ್ಷ 10 ಮಿಲಿಯನ್ ಹೆಕ್ಟೇರ್ ಕಾಡು ನಾಶವಾಗುತ್ತಿದೆ. ಶೇ.33ರಷ್ಟು ಇರಬೇಕಿದ್ದ ಕಾಡು ಶೇ.22ರಷ್ಟಿದೆ. ಇದು ಪರಿಸರ ಹಾಗೂ ಹವಾಮಾನದ ಮೇಲೆ ನೇರ ಪರಿಣಾಮ ಬೀರಲಿದೆ ಎಂದರು.

ಈ ನಿಟ್ಟಿನಲ್ಲಿ ಬೆಂ.ಕೃಷಿ ವಿಶ್ವವಿದ್ಯಾನಿಲಯದ ಜಿಕೆವಿಕೆ ಆವರಣ ಸೇರಿ ಇತರೆಡೆಗಳಲ್ಲಿ ಒಟ್ಟು ಆರು ಸಾವಿರ ಗಿಡಗಳನ್ನು ನೆಟ್ಟು ಪೋಷಿಸಲಾಗುತ್ತಿದೆ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಭಾಗಿತ್ವದೊಂದಿಗೆ 20 ಸಾವಿರ ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ರೂಪಿಸಿ 'ಹಸಿರು ಕ್ಯಾಂಪಸ್'ನತ್ತ ದಾಪುಗಾಲು ಹಾಕಲಾಗುತ್ತಿದೆ. ಪ್ರಸ್ತುತ ವರ್ಷದಿಂದ ಸ್ನಾತಕ ಪದವಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಒಂದು ಗಿಡ ನೆಟ್ಟು ನಾಲ್ಕು ವರ್ಷಗಳ ಕಾಲ ಪೋಷಿಸಲು ರೂಪುರೇಷೆಗಳನ್ನು ತಯಾರಿಸಲಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ಪರಿಸರದ ಬಗ್ಗೆ ಅರಿವು ಮೂಡಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಬೆಂ.ಕೃಷಿ ವಿವಿ ಶಿಕ್ಷಣ ನಿರ್ದೇಶಕ ಡಾ.ಕೆ.ಸಿ.ನಾರಾಯಣಸ್ವಾಮಿ, ಸಂಶೋಧನಾ ನಿರ್ದೇಶಕ ಡಾ.ಎಚ್.ಎಸ್.ಶಿವರಾಮು, ವಿಸ್ತರಣಾ ನಿರ್ದೇಶಕ ಡಾ.ವಿ.ಎಲ್. ಮಧುಪ್ರಸಾದ್, ಡೀನ್ (ಕೃಷಿ) ಡಾ. ಎನ್.ಬಿ.ಪ್ರಕಾಶ್ ಮತ್ತಿತರರಿದ್ದರು.

# ಶಸ್ತ್ರಚಿಕಿತ್ಸೆ ಯಶಸ್ವಿ

ಯಲಹಂಕ ಸ್ಪರ್ಶ್ ಆಸ್ಪತ್ರೆ

**ಬೆಂಗಳೂರು:** ಹಠಾತ್ ಹೃದಯ ಸ್ತಂಭನಕ್ಕೊಳಗಾಗಿದ್ದ 22 ವರ್ಷದ ಯುವಕನಿಗೆ ಅತ್ಯಂತ ಸಂಕೀರ್ಣವಾದ ಹೃದಯ ರಕ್ತನಾಳ ಶಸ್ತ್ರಚಿಕಿತ್ಸೆಯನ್ನು ಯಲಹಂಕದ ಸ್ಪರ್ಶ್ ಆಸ್ಪತ್ರೆ ಇತ್ತೀಚೆಗೆ ಯಶಸ್ವಿಯಾಗಿ ನಡೆಸಿದ ಪರಿಣಾಮ ವ್ಯಕ್ತಿ ಚೇತರಿಕೆ ಕಂಡಿದ್ದಾರೆ.

22 ವರ್ಷದ ರಾಜೇಶ್ (ಹೆಸರು ಬದಲಿಸಲಾಗಿದೆ) ಉಸಿರಾಟ ನಡೆಸಲು ಆಗದಂತಹ ಉಸಿರಾಟದ ತೊಂದರೆಯೊಂದಿಗೆ ತುರ್ತು ಚಿಕಿತ್ಸೆ ವಿಭಾಗಕ್ಕೆ ಬಂದಿದ್ದರು. ಸಮಸ್ಯೆಯನ್ನು ಪರಿಶೀಲಿಸಿದಾಗ ಅವರ ಮಹಾ ಪಧಮನಿಯ ಕವಾಟದಲ್ಲಿ ತೀವ್ರವಾದ ಸೋರಿಕೆ ಕಂಡು ಬಂದಿತ್ತು. ಅವರ ಮಹಾಪಧಮನಿಯ ಆರೋಹಣ ಭಾಗವು ಅತ್ಯಂತ ದೊಡ್ಡದಾಗಿ ಚೀಲದಂತೆ ಹಿಗ್ಗಿಕೊಂಡಿತ್ತು.

ಈ ಕುರಿತಾಗಿ ಹೃದಯ ಶಸ್ತ್ರಚಿಕಿತ್ಸಕ ಡಾ.ನೂತನ್ ಕುಮಾರ್ ಮಾತನಾಡಿ, ರೋಗಿಯ ತಪಾಸಣೆ ನಡೆಸಿದಾಗ ರಕ್ತನಾಳದ ಸೋರಿಕೆ ಮತ್ತು ಮಹಾಪಧಮನಿಯ ಉಬ್ಬುವಿಕೆಯಿಂದ ಹೃದಯಸ್ತಂಭನವಾಗಿರುವುದು ಪತ್ತೆ ಮಾಡಲಾಯಿತು.

ಆತನ ದೇಹದ ಬಹು ಅಂಗಗಳು ವಿರೂಪಗೊಳ್ಳುವ ಅನುವಂಶೀಯ ಸ್ಥಿತಿಯಿಂದ ಆತ ಬಳಲುವ ಸಾಧ್ಯತೆಯಿದ್ದು ತೀವ್ರ ನಿಗಾ ಘಟಕದಲ್ಲಿ ರೋಗಿಯನ್ನು ಸ್ಥಿರಸ್ಥಿತಿಗೆ ತರಲಾಯಿತು.

# ಕವಿಗೆ ದಟ್ಟ ಅನುಭವ ಮುಖ್ಯ

**ಬೆಂಗಳೂರು:** ಕವಿಯಾಗಬೇಕಾದರೆ ಬರೀ ಬರವಣಿಗೆ ಮಾತ್ರ ಮುಖ್ಯ ಅಲ್ಲ ಅನುಭವ ಬಹಳ ಮುಖ್ಯ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಹಿ.ಚಿ.ಬೋರಲಿಂಗಯ್ಯ ಅಭಿಪ್ರಾಯಪಟ್ಟಿದ್ದಾರೆ.

ನಗರದ ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ಕರ್ನಾಟಕ ವಿಕಾಸ ರಂಗದ ವತಿಯಿಂದ ಏರ್ಪಡಿಸಿದ್ದ ಜರಗನಹಳ್ಳಿ ಶಿವಶಂಕರ್ ಹನಿಗವನ ಸಾಹಿತ್ಯ ಪ್ರಶಸ್ತಿ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ವಿತರಿಸಿ ಅವರು ಮಾತನಾಡಿದರು.

ಕವಿಯಾದವನಿಗೆ ದಟ್ಟವಾದ ಅನುಭವವೇ ಮುಖ್ಯ. ಆ ಅನುಭವಗಳೇ ಅಕ್ಷರಗಳಾಗಿ ಕಾವ್ಯಸ್ವರೂಪ ಪಡೆದಾಗ ಅಂತಹ ಕಾವ್ಯ ಗಟ್ಟಿತನದಿಂದ ಕೂಡಿರುತ್ತದೆ ಎಂದ ಅವರು, ಕಡಿಮೆ ಸಾಲುಗಳಲ್ಲಿ ದೊಡ್ಡ ಅರ್ಥ ನೀಡುವುದು ಹನಿಗವದ ವಿಶೇಷ, ಮನುಷ್ಯ ಒಬ್ಬನೇ ಈ ಜಗತ್ತಿನಲ್ಲಿ ಎಂದುಕೊಂಡಿರುವ ನಮಗೆ ಇದರಾಚೆಗೆ ಕವಿತೆಗಳು ನಮ್ಮ ಕಣ್ಣು ತೆರೆಸುತ್ತೇವೆ, ಜೀವಾನುಭವ, ತೆರೆದಿಡುತ್ತಾ ಹೋಗುತ್ತವೆ ಎಂದರು.

ಕನ್ನಡಪರ ಹೋರಾಟಗಾರರಾದ ರಾ.ನಂ. ಚಂದ್ರಶೇಖರ ಮಾತನಾಡಿ, ಹಿರಿಯ ಕವಿ ಹಾ.ಮಾ. ನಾಯಕ ರು ಹನಿಗವನ ಬರೆಯಲು ಬಹಳಷ್ಟು ಶ್ರಮ ವಹಿಸಬೇಕೆಂದು ಹೇಳಿದ್ದು ಅಪ್ಪಟ ಸತ್ಯ. ಸುಶೀಲಾ ಸೋಮಶೇಖರ್ ಅವರು ಹನಿಗವಗಳು ಬಹಳಷ್ಟು ಚೆನ್ನಾಗಿ ಮೂಡಿ ಬಂದಿವೆ. ಸಮಾಜದಲ್ಲಿ ಇರುವ ಅಂಕು ಡೊಂಕುಗಳನ್ನು ತಿದ್ದಿ ತೀಡಿ ಬರೆದಿದ್ದಾರೆಂದರು.

ಹೊಸ ತಲೆಮಾರಿನ ಕವಿಗಳನ್ನು ಹುಟ್ಟು ಹಾಕಿದ ಜರಗನಹಳ್ಳಿ ಶಿವಶಂಕರ್ ಅವರು ಬಹಳ ಸ್ಮರಣೀಯರು. ಹನಿಗವನ ಕಮ್ಮಟಗಳನ್ನು ಏರ್ಪಡಿಸಿ ಆ ಪ್ರಕಾರವನ್ನು ಜನಪ್ರಿಯಗೊಳಿಸಿದರು ಎಂದು ಮೆಲುಕು ಹಾಕಿದರಲ್ಲದೆ, ಬೋರಲಿಂಗಯ್ಯ ಅವರು ತಾಂತ್ರಿಕ ಪಠ್ಯದಲ್ಲಿ ಕನ್ನಡ ಒಂದು ವಿಷಯವಾಗಿ ಓದಬೇಕು ಎಂದು ಸರ್ಕಾರಕ್ಕೆ ವರದಿ ಕೊಟ್ಟು ಇಂದು ಅದನ್ನು ಜಾರಿಗೆ ತಂದಿರುವುದು ಒಳ್ಳೆಯ ಬೆಳವಣಿಗೆ ಎಂದು ಸಂತಸ ವ್ಯಕ್ತಪಡಿಸಿದರು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸುಶೀಲಾ ಸೋಮಶೇಖರ್ ಅವರು, ಜರಗನಹಳ್ಳಿ ಶಿವಶಂಕರ್ ಅವರ ಮನೆಯ ಮಗಳಾಗಿ ಬೆಳೆದಿದ್ದೇನೆ. ಅವರು ನನ್ನನ್ನು ಬೆಳೆಸಿದ್ದಾರೆ. ಅವರ ಹೆಸರನ್ನಲ್ಲಿ ಪ್ರಶಸ್ತಿ ಸ್ವೀಕರಿಸುವುದು ನನ್ನ ಪುಣ್ಯ ಎಂದು ಕೃತಜ್ಞತೆ ಸಲ್ಲಿಸಿದರು. ರಫಾಯಲ್ ಸ್ವಾಗತಿಸಿದರು, ಸ.ನ.ನಂಜೇಗೌಡ ವಂದಿಸಿದರು. ಬಿ.ಎಂ.ಗಂಗಣ್ಣ ನಿರೂಪಣೆ ಮಾಡಿದರು, ಕರ್ನಾಟಕ ವಿಕಾಸರಂಗದ ಅಧ್ಯಕ್ಷ ವ.ಚ.ಚನ್ನೇಗೌಡ ಸೇರಿದಂತೆ ಹಲವು ಕವಿಗಳು ಚಿಂತಕರು ಸಾಹಿತ್ಯ ಆಸಕ್ತರು ಪಾಲ್ಗೊಂಡಿದ್ದರು.




## ಟ್ರೈಟಾನ್ ವಾಲ್ವ್ಸ್ ಲಿಮಿಟೆಡ್

TRITON VALVES LTD.

ಕಾರ್ಪೊರೇಟ್ ಐಡೆಂಟಿಟಿ ನಂ. (ಸಿಐಎನ್): L25119KA1975PLC002867
ನೋಂದಾಯಿತ ಕಚೇರಿ: ಸನ್‌ರೈಸ್ ಚೇಂಬರ್ಸ್, 22, ಹಲಸೂರು ರಸ್ತೆ, ಬೆಂಗಳೂರು-560 042.
ದೂ: +91 80 25588965/66; ಫ್ಯಾಕ್ಸ್: +91 80 25586483
ಇಮೇಲ್: investors@tritonvalves.com; ವೆಬ್‌ಸೈಟ್: www.tritonvalves.com

### ಕಂಪೆನಿಯ 48ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ, ಇ-ಮತದಾನ ಮತ್ತು ಪುಸ್ತಕ ಮುಚ್ಚುವಿಕೆ ಮಾಹಿತಿ

ಕಂಪೆನಿಯ ನಲ್ವತ್ತೆಂಟನೇ (48ನೇ) ವಾರ್ಷಿಕ ಸಾಮಾನ್ಯ ಸಭೆಯು (ಎಜಿಎಂ) ಶುಕ್ರವಾರ, 13ನೇ ಸೆಪ್ಟೆಂಬರ್, 2024ರಂದು ಸಂಜೆ 4:00 ಗಂಟೆಗೆ ವಿಡಿಯೋ ಕಾನ್ಫರೆನ್ಸ್ (ವಿಸಿ) ಅಥವಾ ಅದರ್ ಆಡಿಯೋ ವಿಷುಯಲ್ ಮೀನ್ಸ್ (ಒಎವಿಎಂ) ಮೂಲಕ ದಿನಾಂಕ ಆಗಸ್ಟ್ 21, 2024ರ ನೋಟೀಸ್‌ನಲ್ಲಿ ತಿಳಿಸಿರುವಂತೆ ನಡೆಯಲಿದ್ದು, ಜೊತೆಗೆ ಸಂಖ್ಯೆ 14/2020 (ದಿನಾಂಕ ಏಪ್ರಿಲ್ 8, 2020), ಸುತ್ತೋಲೆ ಸಂಖ್ಯೆ: 17/2020 (ದಿನಾಂಕ ಏಪ್ರಿಲ್ 13, 2020), ಸುತ್ತೋಲೆ ಸಂಖ್ಯೆ: 20/2020 (ದಿನಾಂಕ ಮೇ 5, 2020), ಮತ್ತು ಸುತ್ತೋಲೆ ಸಂಖ್ಯೆ: 02/2021 (ದಿನಾಂಕ ಜನವರಿ 13, 2021) ಮತ್ತು ಇತ್ತೀಚಿನ ಸುತ್ತೋಲೆ ಸಂಖ್ಯೆ: 09/2023 ದಿನಾಂಕ 25ನೇ ಸೆಪ್ಟೆಂಬರ್ 2023 ("ಎಂಸಿಎ ಸುತ್ತೋಲೆಗಳು") ಹಾಗೂ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("ಎಸ್‌ಇಬಿಐ") ಸುತ್ತೋಲೆ ಸಂಖ್ಯೆ: SEBI/HO/CFD/CMD1/CIR/P/2020/79, ದಿನಾಂಕ ಮೇ 12, 2020 ಜೊತೆಗೆ ಸುತ್ತೋಲೆ ಸಂಖ್ಯೆ: SEBI/HO/CFD/CMD2/CIR/P/2021/11, ದಿನಾಂಕ ಜನವರಿ 15, 2021, SEBI/HO/CFD/CMD2/CIR/P/2022/62 ದಿನಾಂಕ ಮೇ 13, 2022 ಮತ್ತು SEBI/HO/CFD/PoD-2/P/CIR/2023/4 ದಿನಾಂಕ ಜನವರಿ 5, 2023 ಮತ್ತು SEBI/HO/CFD/PoD-2/P/CIR/2023/167 ದಿನಾಂಕ ಅಕ್ಟೋಬರ್ 07, 2023 ಓದಿಕೊಂಡಂತೆ ಭಾರತ ಸರ್ಕಾರದ ಮಿನಿಸ್ಟ್ರಿ ಆಫ್ ಕಾರ್ಪೋರೇಟ್ ಅಫೇರ್ಸ್‌ನಿಂದ (ಎಂಸಿಎ) ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("ಎಸ್‌ಇಬಿಐ") ಹೊರಡಿಸಲಾದ ಎಲ್ಲಾ ಸುತ್ತೋಲೆಗಳಿಗೆ ಅನುಗುಣವಾಗಿ ಸಭೆಯ ಸೂಚನೆಯಲ್ಲಿ ನಿಗದಿಪಡಿಸಿರುವ ವ್ಯವಹಾರಗಳನ್ನು ನಡೆಸಲಾಗುವುದು.

ವಿಸಿ/ಒಎವಿಎಂ ಸೌಲಭ್ಯವನ್ನು ಒದಗಿಸಲು ಮತ್ತು ಎಜಿಎಂಗಾಗಿ ವಿದ್ಯುನ್ಮಾನ ವಿಧಾನಗಳ ಮೂಲಕ ಮತದಾನ ಮಾಡಲು ಕಂಪನಿಯು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿಸ್ ಲಿಮಿಟೆಡ್ (ಎನ್‌ಎಸ್‌ಡಿಎಲ್) ಅನ್ನು ನೇಮಿಸಿದೆ. ಡಿಮೆಟಿರಿಯಲೈಸ್ಡ್‌ವಿಧಾನದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು, ಅವರ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್ ಮೂಲಕ ತಮ್ಮ ಸಂಬಂಧಿತ ಡಿಪಾಸಿಟರೀಸ್‌ಗಳೊಂದಿಗೆ ನೋಂದಾಯಿಸಲು ವಿನಂತಿಸಲಾಗಿದೆ. ಭೌತಿಕ ವಿಧಾನದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (ಆರ್‌ಟಿಎ) ಕ್ಯಾನ್‌ಬ್ಯಾಂಕ್‌ಗೆ ravi@ccsl.co.in ಅಥವಾ canbankrta@ccsl.co.in ಗೆ ವಿವರಗಳನ್ನು ಒದಗಿಸಲು ವಿನಂತಿಸಲಾಗಿದೆ. ಎಜಿಎಂ ಸೂಚನೆಯೊಂದಿಗೆ ಮಾರ್ಚ್ 31, 2024ಕ್ಕೆ ಅಂತ್ಯಗೊಂಡ ವಾರ್ಷಿಕ ಹಣಕಾಸು ಹೇಳಿಕೆಗಳು ಸೇರಿದಂತೆ 2023-24ನೇ ಸಾಲಿನ ಕಂಪನಿಯ ವಾರ್ಷಿಕ ವರದಿಯನ್ನು ("ವಾರ್ಷಿಕ ವರದಿ") ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯೊಂದಿಗೆ ಅಥವಾ ತಮ್ಮ ಸಂಬಂಧಿತ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್‌ರವರೊಂದಿಗೆ (ಡಿಪಾಸಿಟರೀಸ್) ನೋಂದಾಯಿಸಿಕೊಂಡಿರುವ ಎಲ್ಲಾ ಸದಸ್ಯರಿಗೆ ದಿನಾಂಕ ಆಗಸ್ಟ್ 21 2024ರಂದು ಇಮೇಲ್ ಮೂಲಕ ಮಾತ್ರ ಕಳುಹಿಸಲಾಗಿದೆ. 48ನೇ ಎಜಿಎಂನ ನೋಟಿಸು ಮತ್ತು 2023-24ನೇ ಸಾಲಿನ ವಾರ್ಷಿಕ ಹಣಕಾಸು ವರದಿಯು ಕಂಪನಿಯ ವೆಬ್‌ಸೈಟ್‌ನಲ್ಲಿ www.tritonvalves.com, ಬಿಎಸ್‌ಇ ಲಿಮಿಟೆಡ್ www.bseindia.com ನಲ್ಲಿ ಮತ್ತು ಎನ್‌ಎಸ್‌ಡಿಎಲ್‌ನ ವೆಬ್‌ಸೈಟ್ www.evoting.nsdl.com ನಲ್ಲಿ ಲಭ್ಯವಿದೆ.

**ವಿದ್ಯುನ್ಮಾನ ವಿಧಾನದ ಮೂಲಕ ಇ-ಮತದಾನ:**

ಕಾಯ್ದೆಯ ಸೆಕ್ಷನ್ 108ರ ಜೊತೆಗೆ ನಿಯಮ 20ನ್ನು ಓದಿಕೊಂಡಂತೆ ಕಂಪೆನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 (ತಿದ್ದುಪಡಿಯಂತೆ), ದಿ ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಸೆಕ್ರೇಟ್ರಿಯಲ್ ಸ್ಟ್ಯಾಂಡರ್ಡ್ ಮತ್ತು ಸೆಬಿಯ ನಿಯಮ 44 (ಲಿಸ್ಟಿಂಗ್ ಬಾಧ್ಯತೆ ಮತ್ತು ಬಹಿರಂಗಪಡಿಸುವಿಕೆ ಅವಶ್ಯಕತೆಗಳು) ನಿಯಮಗಳು, 2015 ತಿದ್ದುಪಡಿಯಂತೆ ಹಾಗೂ ಎಂಸಿಎ ಸುತ್ತೋಲೆಗಳ ಅನುಸಾರವಾಗಿ, ಕಂಪನಿಯು ತನ್ನ ಸದಸ್ಯರಿಗೆ ಎಜಿಎಂನಲ್ಲಿ ವ್ಯವಹಾರವನ್ನು ವ್ಯವಹರಿಸುವುದಕ್ಕೆ ಸಂಬಂಧಿಸಿದಂತೆ ರಿಮೋಟ್ ಇ-ಮತದಾನ ಸೌಲಭ್ಯವನ್ನು ಒದಗಿಸುತ್ತಿದೆ ಮತ್ತು ಈ ಉದ್ದೇಶಕ್ಕಾಗಿ, ವಿದ್ಯುನ್ಮಾನ ವಿಧಾನಗಳ ಮೂಲಕ ಮತದಾನಕ್ಕೆ ಅನುಕೂಲವಾಗುವಂತೆ ಮಾಡಲು ಎನ್‌ಎಸ್‌ಡಿಎಲ್ ಅನ್ನು ನೇಮಿಸಿದೆ.

ರಿಮೋಟ್ ಇ-ಮತದಾನದ ಸೌಲಭ್ಯವು ಈ ಕೆಳಗಿನ ಅವಧಿಯಲ್ಲಿ ಲಭ್ಯವಿರುತ್ತದೆ:

| | |
|---|---|
| ರಿಮೋಟ್ ಇ-ಮತದಾನ ಪ್ರಾರಂಭದ ದಿನಾಂಕ ಮತ್ತು ಸಮಯ | ಸೋಮವಾರ, ಸೆಪ್ಟೆಂಬರ್ 09, 2024 (ಬೆಳಿಗ್ಗೆ 09:00 ಐಎಸ್‌ಟಿ) |
| ರಿಮೋಟ್ ಇ-ಮತದಾನ ಮುಕ್ತಾಯದ ದಿನಾಂಕ ಮತ್ತು ಸಮಯ | ಗುರುವಾರ, ಸೆಪ್ಟೆಂಬರ್ 12, 2024 (ಸಂಜೆ 05:00 ಐಎಸ್‌ಟಿ) |
| ಇ-ಮತದಾನ ಹಾಗೂ ನಂತರ ಎಜಿಎಂನಲ್ಲಿ ಈಕ್ವಿಟಿ ಷೇರುಗಳ ಮೇಲೆ ಲಾಭಾಂಶ ಘೋಷಿಸಿದರೆ ಅದನ್ನು ಪಡೆಯಲು ಅರ್ಹತೆಯನ್ನು ನಿರ್ಧರಿಸುವ ನಿರ್ಣಾಯಕ ದಿನಾಂಕ | ಶುಕ್ರವಾರ, ಸೆಪ್ಟೆಂಬರ್ 06, 2024 |

ಎಜಿಎಂಗೆ ಮುಂಚಿತವಾಗಿ ರಿಮೋಟ್ ಇ-ಮತದಾನದ ಮೂಲಕ ಮತ ಚಲಾಯಿಸಿದ ಸದಸ್ಯರು ವಿಸಿ ಮೂಲಕ ಎಜಿಎಂಗೆ ಹಾಜರಾಗಬಹುದು ಆದರೆ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ. ರಿಮೋಟ್ ಇ-ಮತದಾನದ ಮೂಲಕ ಮತ ಚಲಾಯಿಸದ ಸದಸ್ಯರು ಮತ್ತು ವಿಸಿ ಮೂಲಕ ಎಜಿಎಂನಲ್ಲಿ ಸದಸ್ಯರು ಹಾಜರಿದ್ದಲ್ಲಿ, ಅವರು ಎಜಿಎಂನಲ್ಲಿ ಇ-ಮತದಾನದ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.

ಯಾವುದೇ ಪ್ರಶ್ನೆಗಳಿದ್ದಲ್ಲಿ, ಸದಸ್ಯರಿಗಾಗಿ ಆಗಾಗ್ಗೆ ಕೇಳಲಾಗುವ ಪ್ರಶ್ನೆಗಳು (FAQs ಅನ್ನು) ಮತ್ತು ಸದಸ್ಯರಿಗಾಗಿ ಇ-ಮತದಾನ ಬಳಕೆದಾರರ ಕೈಪಿಡಿಯನ್ನು www.evoting.nsdl.com ನ ಡೌನ್‌ಲೋಡ್ ವಿಭಾಗದಲ್ಲಿ ವೀಕ್ಷಿಸಬಹುದು ಅಥವಾ ಎನ್‌ಎಸ್‌ಡಿಎಲ್ ಸಹಾಯ ಕೇಂದ್ರಕ್ಕೆ evoting@nsdl.co.in ಇಮೇಲ್ ಕಳುಹಿಸಬಹುದು ಅಥವಾ 022 – 4886 7000ಗೆ ಕರೆಮಾಡಬಹುದು.

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 91 ಮತ್ತು ಸೆಬಿಯ ನಿಯಮಗಳು 42ರ ಅನುಸಾರ (ಲಿಸ್ಟಿಂಗ್ ಬಾಧ್ಯತೆ ಮತ್ತು ಬಹಿರಂಗಪಡಿಸುವಿಕೆ ಅವಶ್ಯಕತೆಗಳು) ನಿಯಮಗಳು, 2015ರಂತೆ ಎಜಿಎಂ ಹಾಗೂ ನಂತರ ಎಜಿಎಂನಲ್ಲಿ ಅನುಮೋದನೆ ಪಡೆದರೆ ಲಾಭಾಂಶ ಪಾವತಿಯ ಉದ್ದೇಶದಿಂದ ಸದಸ್ಯರ ನೋಂದಣಿ ಪುಸ್ತಕ ಮತ್ತು ಕಂಪನಿಯ ಷೇರು ವರ್ಗಾವಣೆ ಪುಸ್ತಕಗಳು **ಶನಿವಾರ, ಸೆಪ್ಟೆಂಬರ್ 07, 2024ರಿಂದ ಶುಕ್ರವಾರ, ಸೆಪ್ಟೆಂಬರ್ 13, 2024ರ** (ಎರಡೂ ದಿನಗಳನ್ನು ಒಳಗೊಂಡಂತೆ) ವರೆಗೆ ಮುಚ್ಚಲ್ಪಟ್ಟಿರುತ್ತವೆ.

ಟ್ರೈಟಾನ್ ವಾಲ್ವ್ಸ್ ಲಿಮಿಟೆಡ್ ಪರವಾಗಿ
ಸಹಿ/-
ಬಿಭೂತಿ ಭೂಸನ್ ಮಿತ್ರ
ಕಂಪನಿ ಕಾರ್ಯದರ್ಶಿ & ಕಂಪ್ಲೈನ್ಸ್ ಅಧಿಕಾರಿ

ದಿನಾಂಕ : 21ನೇ ಆಗಸ್ಟ್, 2024
ಸ್ಥಳ : ಬೆಂಗಳೂರು



**IN THE COURT OF SENIOUR CIVIL JUDGE AND J.M.F.C AT PAVAGADA**
**O.S.No:146/2023**

**Plaintiff:** Smt. K P. Seethalakshmi
**-Vs- Defendants:** 1) S.R.Keshavaraju S/o late S.G.Ramappa about 65 years, R/o Sarvaatapura village and now residing at Banashankari Extension, Pavagada Town-561202. 2) Smt C.Roja W/o S.R.Keshavaraju Residing with her husband the above shown person (D-1) 3) Smt Roopadevi.S. W/o V.Manjunath aged about 40 years, Balajiga by caste, R/o 383, 1st main road, Hebbala, H.A.Farm Bangalore North, Bangalore-560024.

**NOTICE BY PAPER NOTIFICATION AGAINST DEFENDANTS 1 TO 3 UNDER ORDER 5 RULE 20 OF C.P.C IS AS FOLLOWS:**

Whereas the top noted suit had been filed by the plaintiff for recovery of the amount due from the D-1 and 2 and 3 suit summons of this case had not been served upon by you 1 to 3 inspite of issuing summons several times from this Hon'ble court. Hence this notice by way of paper notification had been issued against you Defendants 1 to 3 and take notice that you have to appear before this court in person or thorough any Advocate to put in your appearance to prosecute the case in your favour on 13-09-2024. Further take this notice that in case if you 1 to 3 do not appear in this case on the said day and date, the matter will be heard and decided in your absence.

By order of the court,
Sd/- **Sheristedar,** Senior Civil Judge and J.M.F.C Pavagada
Date: 17-8-24. Pavagada.



ಕಸ್ತೂರಿ
ಎಲ್ಲಾ ಅಂಗಡಿಗಳಲ್ಲಿ ಲಭ್ಯ!

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು
ಜಾಹೀರಾತಿಗಾಗಿ ಸಂಪರ್ಕಿಸಿ : Mobile : 9008774228
E-mail : skadvtblr@gmail.com

**ಬಹಿರಂಗ ಹರಾಜು**

ಮೆ॥ ಚೋಟದೇವಿ ಪಾನ್ ಬ್ರೋಕರ್ಸ್, # 2098, ಬಸವೇಶ್ವರ ರಸ್ತೆ, ಮೈಸೂರು-04. ಇವರಲ್ಲಿ 11-11-2020 ರಿಂದ 13-03-2023 ರವರೆಗೆ ಗಿರವಿ ಇಟ್ಟು ಬಿಡಿಸಿಕೊಳ್ಳದ ಪದಾರ್ಥಗಳನ್ನು ದಿನಾಂಕ : 29-08-2024 ರಂದು ಬೆಳಿಗ್ಗೆ 11.00 ಗಂಟೆಗೆ ಈ ಮೇಲ್ಕಂಡ ವಿಳಾಸದಲ್ಲಿ ನರೇಶ್ ಕುಮಾರ್, ಗೌ. ಅಪ್ರೂವ್ಡ್ ಆಕ್ಷನೀಯರ್, ಕೆ-50, ಬನುಮಯ್ಯ ಚೌಕ, ಮೈಸೂರು-24. ಇವರು ಹರಾಜು ಮಾಡುವರು.

**ಬಹಿರಂಗ ಹರಾಜು**

ಮೆ॥ ಮೀನ ಪಾನ್‌ಬ್ರೋಕರ್, ನಂ. 1/ಎ, ಚುಂಚಘಟ್ಟ ಮೇನ್ ರೋಡ್, ಕೋಣನಕುಂಟೆ ಪೋಸ್ಟ್, ಬೆಂಗಳೂರು – 560062. ಇವರಲ್ಲಿ ದಿನಾಂಕ : 11-01-2022 ರಿಂದ 14-12-2022 ರವರೆಗೆ ಅಡವಿಟ್ಟು ವಾಯಿದೆ ಮೀರಿದ್ದರೂ ಸಹ ಬಿಡಿಸದೆ ಇರುವ ವಸ್ತುಗಳನ್ನು (ಸೂಚನೆ : ಕರ್ನಾಟಕ ಋಣ ಪರಿಹಾರ ಕಾಯ್ದೆಯಡಿಯಲ್ಲಿ ಬರುವ ವಸ್ತುಗಳನ್ನು ಹೊರತು ಪಡಿಸಿ) ಕೆ.ಪಿ.ಬಿ. ಆಕ್ಟ್ 20(1)ನೇ ಪ್ರಕಾರ ದಿನಾಂಕ : 28-08-2024 ರಂದು ಬೆಳಗ್ಗೆ 10.00 ಗಂಟೆಗೆ ಮೇಲ್ಕಂಡ ಗಿರವಿದಾರರ ವಿಳಾಸದಲ್ಲಿ ಬಿ.ಜೆ.ಜೆ. ಅಸೋಸಿಯೇಟ್ಸ್, ಸರ್ಕಾರದಿಂದ ಮಾನ್ಯತೆ ಪಡೆದ ಹರಾಜುದಾರರು, ನಂ. 75/7, ಇಂದಿರಾ ಮಾರ್ಕೆಟ್, ನಗರ್ತಪೇಟೆ ಮುಖ್ಯರಸ್ತೆ, ಬೆಂಗಳೂರು – 560002 ಇವರು ಹರಾಜು ಮಾಡುವರು. ದಯಮಾಡಿ ಹರಾಜಿನಲ್ಲಿ ಭಾಗವಹಿಸುವವರು ಸಾಮಾಜಿಕ ಅಂತರ ಮತ್ತು ಮಾಸ್ಕ್ ಧರಿಸಬೇಕಾಗಿ ವಿನಂತಿ.


## ಇಂದಿನ ಕಾರ್ಯಕ್ರಮ

22-08-2024 । ಗುರುವಾರ

**ಬೆಳಗ್ಗೆ: ಬೆಂಗಳೂರು ಜಲಮಂಡಳಿ,** ಯುನೈಟೆಡ್ ಇನ್ನೋವೇಷನ್ಸ್ ಪ್ರಾಜೆಕ್ಟ್ ಫಾರ್ ವಾಟರ್ ಸೆಕ್ಯೂರಿಟಿ ಇನ್ ಬೆಂಗಳೂರು ಸಿಟಿ ಯೋಜನೆಗೆ, ಮಳೆ ನೀರು ಕೊಯ್ಲು ಜಾಗೃತಿ ಅಭಿಯಾನ, ವರುಣ ಮಿತ್ರ ತರಬೇತಿ ಕಾರ್ಯಕ್ರಮಕ್ಕೆ, 'ಬಾಗಿಲಿಗೆ ಬರಲಿದೆ ಕಾವೇರಿ ಸಂಪರ್ಕ" 110 ಹಳ್ಳಿಗಳಿಗೆ ಕಾವೇರಿ ಸಂಪರ್ಕ ಅಭಿಯಾನಕ್ಕೆ ಚಾಲನೆ. ಉದ್ಘಾಟನೆ: ಡಿಸಿಎಂ ಡಿ.ಕೆ.ಶಿವಕುಮಾರ್. ಸ್ಥಳ: ವಿಧಾನಸೌಧದ ಪೂರ್ವದ್ವಾರದ ಮೆಟ್ಟಿಲುಗಳ ಮುಂಭಾಗ. 10.00

**ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್,** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಂಯುಕ್ತಾಶ್ರಯದಲ್ಲಿ ಶಾಸ್ತ್ರೀಯ ಕನ್ನಡ ಸ್ಥಾನಮಾನ, ಕನ್ನಡ ಜಾಗೃತಿ ಕಾರ್ಯಾಗಾರ. ಉದ್ಘಾಟನೆ: ಡಾ.ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಡಾ.ವೂಡೇ ಪಿ.ಕೃಷ್ಣ, ಮುಖ್ಯಅತಿಥಿ: ಡಾ.ಸಂತೋಷ್ ಹಾನಗಲ್. ಸ್ಥಳ: ಶೇಷಾದ್ರಿಪುರಂ, ಗರ್ಲ್ಸ್ ಸ್ಟ್ರೀಟ್, ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಸಭಾಂಗಣ. 10.00

**ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ,** ವ್ಯಂಗ್ಯಚಿತ್ರಕಾರ ಅಬು ಅಬ್ರಾಹಂ ಅವರ ಜನ್ಮಶತಮಾನೋತ್ಸವ ಅಂಗವಾಗಿ ಅಬು ಅಬ್ರಾಹಂ ರಚಿಸಿದ ವ್ಯಂಗ್ಯಚಿತ್ರಗಳ ಪ್ರದರ್ಶನ. ಸ್ಥಳ: ಎಂ.ಜಿ.ರಸ್ತೆ, ಮಿಡ್ ಫೋರ್ಡ್ ಗಾರ್ಡನ್, ಟ್ರಿನಿಟಿ ವೃತ್ತ, ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ. 11.00


**ಮಧ್ಯಾಹ್ನ : ಜನಪದ ಸಿರಿ ಕನ್ನಡ ದೇಸಿ ಚಾನಲ್,** ಅಂತಾರಾಷ್ಟ್ರೀಯ ಜಾನಪದ ದಿನಾಚರಣೆ ಅಂಗವಾಗಿ ರಾಷ್ಟ್ರೀಯ ಜನಪದ ಸಿರಿ ಪ್ರಶಸ್ತಿ. ಸಾನ್ನಿಧ್ಯ: ಶಿವಾನುಭವ ಚರಮೂರ್ತಿ ಶಿವರುದ್ರ ಮಹಾಸ್ವಾಮೀಜಿ, ಅಧ್ಯಕ್ಷತೆ: ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಡಾ.ಹಿ.ಚಿ.ಬೋರಲಿಂಗಯ್ಯ, ಮುಖ್ಯಅತಿಥಿ: ಸಂಸದ ತೇಜಸ್ವಿ ಸೂರ್ಯ, ಶಾಸಕ ಸಿ.ಕೆ.ರಾಮಮೂರ್ತಿ, ವಿಪಕ್ಷ ನಾಯಕ ಆರ್. ಅಶೋಕ್. ಸ್ಥಳ: ಬನಶಂಕರಿ 2ನೇ ಹಂತ, 9ನೇ ಮುಖ್ಯರಸ್ತೆ, ಸುಚಿತ್ರ ಸಿನಿಮಾ ಮತ್ತು ಕಲ್ಚರಲ್ ಅಕಾಡೆಮಿ. 3.00

**ಸಂಜೆ : ಕರ್ನಾಟಕ ನಾಟಕ ಅಕಾಡೆಮಿ,** ತಿಂಗಳ ನಾಟಕ ಸಂಭ್ರಮ. ತಿಂಗಳ ಅತಿಥಿ: ರಂಗತಜ್ಞೆ ಎನ್.ಮಂಗಳಾ. ನಟನ ಮೈಸೂರು ಅಭಿನಯಿಸುವ 'ಸ್ಥಾವರವೂ ಜಂಗಮ' ನಾಟಕ ಪ್ರದರ್ಶನ. ನಿರ್ದೇಶನ: ಮಂಡ್ಯ ರಮೇಶ್. ಸ್ಥಳ: ಮಲ್ಲತ್ತಹಳ್ಳಿ, ಕಲಾಗ್ರಾಮ, ಸಮುಚ್ಚಯ ಭವನ. 6.30

**ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್,** '10-12ನೇ ಶತಮಾನದ ಸಾಹಿತ್ಯ ಮತ್ತು ಧರ್ಮ' ಕುರಿತು ಡಾ.ಜೆ.ವಿಶ್ವನಾಥ್ ಅವರಿಂದ ಉಪನ್ಯಾಸ. ಸಾಮೂಹಿಕ ಸಂಕಷ್ಟಹರ ಗಣಪತಿ ಪೂಜೆ. ಸ್ಥಳ: ಜಯನಗರ, 9ನೇ ಬಡಾವಣೆ, ರಾಗೀಗುಡ್ಡ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್. 6.30

**ಕನ್ನಡ ಯುವಜನ ಸಂಘ,** ಕಣ್ಣಿನ ಆರೋಗ್ಯ ಕುರಿತ ಉಪನ್ಯಾಸ ಮಂಡನೆ. ಉಪನ್ಯಾಸ: ಎಚ್.ಗೋವಿಂದಯ್ಯ, ಮುಖ್ಯಅತಿಥಿ: ಎಂ.ಸಿ.ನರೇಂದ್ರ, ಅಧ್ಯಕ್ಷತೆ: ಜಗದೀಶ್ ರೆಡ್ಡಿ. ಸ್ಥಳ: ಹೊಂಬೇಗೌಡನಗರ, ಎಚ್.ಸಿದ್ದಯ್ಯ ರಸ್ತೆ, ಕನ್ನಡ ಯುವಜನ ಸಂಘ. 6.30

### ರಾಯರ ಆರಾಧನೆ



**ಶ್ರೀ ಗುರುರಾಘವೇಂದ್ರ ಸೇವಾ ಟ್ರಸ್ಟ್,** ಶ್ರೀ ರಾಘವೇಂದ್ರ ಯಕ್ಷ ಕಲಾವೃಂದದಿಂದ 'ಮಹಿಷಾಸುರ ಮರ್ದಿನಿ' ಯಕ್ಷಗಾನ. ಸ್ಥಳ: ದೂರವಾಣಿನಗರ, ಶ್ರೀ ಗುರುರಾಘವೇಂದ್ರ ಸೇವಾ ಟ್ರಸ್ಟ್. 5.00

**ಶ್ರೀ ರಾಘವೇಂದ್ರಸೇವಾ ಸಮಿತಿ,** 'ಕಲಿಯುಗ ಕಲ್ಪತರು ಶ್ರೀ ರಾಘವೇಂದ್ರತೀರ್ಥರು' ವಿಷಯ ಕುರಿತು ಕಲ್ಯಾ ಶ್ರೀಕಾಂತಾಚಾರ್ಯರಿಂದ ಧಾರ್ಮಿಕ ಪ್ರವಚನ. ಸ್ಥಳ: ಸುಧೀಂದ್ರನಗರ, ಈಜುಕೊಳದ ಬಡಾವಣೆ, 6ನೇ ಅಡ್ಡರಸ್ತೆ, ಶ್ರೀ ರಾಘವೇಂದ್ರ ಸ್ವಾಮಿಗಳ ಮಠ. 6.30

**ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ,** ಜಯತೀರ್ಥ ಮೇವುಂಡಿ ಮತ್ತು ವೃಂದದವರಿಂದ 'ದಾಸ ಝೇಂಕಾರ'. ಸ್ಥಳ: ಜಯನಗರ, 5ನೇ ಬಡಾವಣೆ, ನಂಜನಗೂಡು, ಶ್ರೀ ರಾಘವೇಂದ್ರಸ್ವಾಮಿ ಮಠ. 6.30

**ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ,** ಕು. ಪ್ರತೀಕ್ಷಾ ಜಿ ರಾವ್ ಮತ್ತು ಸಂಗಡಿಗರಿಂದ ದಾಸವಾಣಿ. 6.00 ನಾಟ್ಯೇಶ್ವರ ನೃತ್ಯ ಶಾಲಾ ತಂಡದಿಂದ ಭರತನಾಟ್ಯ. ನಿರ್ದೇಶನ: ಕೆ.ಪಿ.ಸತೀಶ್ ಬಾಬು. ಸ್ಥಳ: ಸೀತಾಪತಿ ಅಗ್ರಹಾರ, ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿ ಮಠ. 7.00

**ಶ್ರೀ ಗುರುರಾಘವೇಂದ್ರ ಸೇವಾ ಸಮಿತಿ,** ದಿವ್ಯಶ್ರೀ ರಂಗನಾಥನ್ ಮತ್ತು ವೃಂದದವರಿಂದ ಸ್ಯಾಕ್ಸೋಫೋನ್ ವಾದನ. ಸ್ಥಳ: ಪ್ರಕಾಶನಗರ, ಶ್ರೀ ಗುರುರಾಘವೇಂದ್ರ ಸೇವಾ ಸಮಿತಿ. 7.00

**ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನ,** ಶ್ರೀ ಕೃಷ್ಣ ಗುರುರಾಜ ಸೇವಾ ಸಮಿತಿ ಸಂಯುಕ್ತಾಶ್ರಯದಲ್ಲಿ ವರದರಾಜ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ. ಸ್ಥಳ: ಕತ್ರಿಗುಪ್ಪೆ ಮುಖ್ಯರಸ್ತೆ, ಡಾ.ವಿಶ್ವೇಶತೀರ್ಥ ಮಾರ್ಗ, ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನ. 7.00

**ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ,** ಸಮನ್ವಯ ಡಾನ್ಸ್ ಅಕಾಡೆಮಿಯ ವಿದ್ಯಾರ್ಥಿಗಳಿಂದ ಭರತನಾಟ್ಯ. ನಿರ್ದೇಶನ: ಭಾವನ ಉದಯ ಕಾಂತ್ಯ. ಸ್ಥಳ: ಶೇಷಾದ್ರಿಪುರಂ, ರಾಜೀವಗಾಂಧಿ ವೃತ್ತ, ಪ್ಲಾಟ್‌ಫಾರಂ ರಸ್ತೆ, ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ. 7.00

# ವೈದ್ಯೆ ಕೊಲೆ ಖಂಡಿಸಿ ಪ್ರತಿಭಟನೆ

**ಬೆಂಗಳೂರು:** ಕೋಲ್ಕತ್ತಾದಲ್ಲಿ ವೈದ್ಯೆ ಮೇಲೆ ನಡೆದಿರುವ ಅತ್ಯಾಚಾರ, ಕೊಲೆ ಪ್ರಕರಣವನ್ನು ಖಂಡಿಸಿ ಮಹದೇವಪುರ ಕ್ಷೇತ್ರದ ಶೋಭಾ ಅಪಾರ್ಟ್‌ಮೆಂಟ್ ನಿವಾಸಿಗಳು, ವೈದ್ಯರು ಮೇಣದ ಬತ್ತಿ ಹಿಡಿದು ಕಪ್ಪುಪಟ್ಟಿ ಧರಿಸಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಬಳಗೆರೆ ರಸ್ತೆಯ ಶೋಭಾ ಅಪಾರ್ಟ್‌ಮೆಂಟ್ ನಿವಾಸಿಗಳು ಸುಮಾರು 1 ಕಿ.ಮೀವರೆಗೂ ಮೇಣದ ಬತ್ತಿಹಿಡಿದು ಮೌನ ಪ್ರತಿಭಟನೆ ನಡೆಸಿದರು. ಜೀವ ಕಾಪಾಡುವ ವೈದ್ಯರ ಮೇಲಿನ ಕೃತ್ಯ ಅಮಾನವೀಯ, ಈ ಕೃತ್ಯದಿಂದಾಗಿ ಇಡೀ ದೇಶವೇ ತಲೆತಗ್ಗಿಸುವಂತಾಗಿದೆ.




ಮಹದೇವಪುರ ಕ್ಷೇತ್ರದ ಶೋಭಾ ಅಪಾರ್ಟ್‌ಮೆಂಟ್ ನಿವಾಸಿಗಳು, ವೈದ್ಯರು ಬುಧವಾರ ಮೇಣದ ಬತ್ತಿ ಹಿಡಿದು ಪ್ರತಿಭಟಿಸಿದರು.

ಸ್ವಾತಂತ್ರ್ಯ ಸಿಕ್ಕು 78 ವರ್ಷವಾದರೂ ರಸ್ತೆಗಳಲ್ಲಿ ಈಗಲೂ ಹೆಣ್ಣುಮಕ್ಕಳು ಸ್ವತಂತ್ರವಾಗಿ ಓಡಾಡುವಂತಿಲ್ಲ. ಈ ಘಟನೆಗೆ ಸಂಬಂಧಿಸಿದಂತೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಇಲ್ಲದಿದ್ದರೆ ಉಗ್ರ ಹೋರಾಟ ಮಾಡಲಾಗುತ್ತದೆ ಎಂದು ನಿವಾಸಿಗಳು ಎಚ್ಚರಿಸಿದರು. ಡಾ.ಭಾರತಿ, ಗೀತಾ, ಶಾರದಾ, ಐಶ್ವರ್ಯ, ಚೇತನ್, ಬೃಂದಾ, ಅನಿತಾ ಮತ್ತಿತರರಿದ್ದರು.